ಹಾಡು–೧

ನಿಗಮ ನಿಗಮಾಂತ ವರ್ಣಿತ ಮನೋಹರ
ರೂಪ
ನಾಗರಾಜ ಧರುಡ ಶ್ರೀ ನಾರಾಯಣ

ನಾರಾಯಣ ಶ್ರೀಮನ್ ನಾರಾಯಣ
ನಾರಾಯಣ ಲಕ್ಷ್ಮೀ ನಾರಾಯಣ
ನಾರಾಯಣ ವೇಂಕಟ ನಾರಾಯಣ

ದೀಪಿಂಚು ವೈರಾಗ್ಯ ದಿವ್ಯ ಸೌಖ್ಯಂಬೀಯ
ನೋಪಕ ಕದ ನನ್ನು ನೊಡಬರಪುಚು
ಪೈಪೈನೆ ಸಂಸಾರ ಬಂಧಮುಲ ಕಟ್ಟೇವು
ನಾ ಪಲುಕು ಚೆಲ್ಲುನ ನಾರಾಯಣ

ವಿವಿಧ ನಿರ್ಬಂಧಮುಲ ವೆಡಲ
ದ್ರೋಯಕನನ್ನು
ಭವಸಾಗರಮುಲ ದಡಬಡಜೇತುರ
ದಿವಿಜೇಂದ್ರ ವಂದ್ಯ ಶ್ರೀ
ತಿರುವೇಂಕಟಾದ್ರೀಶ
ನವನೀತ ಚೋರ ಶ್ರೀನಾರಾಯಣ

೧. ಗಸ ಮಗ ದಮ ನಿದ ಸನಿ
೨. ಸಗ ಮಗ ಸನಿ ದಮ ಗಸ
೩. ಸನಿದಮ ಗಮದನಿಸ
೪. ಸಗ ಸನಿದಮ ಗಮದನಿ
೫. ಸನಿ ಸನಿ ದಮ ದನಿಸ
೬. ಗಮದನಿ ಸನಿದಮ ದನಿ
೭. ಸಗಮಗ ಸನಿದಮ ದನಿ
೮. ಸಗಮಗ ಸನಿದಮ ದನಿ

ನಾರಾಯಣ ಶ್ರೀಮನ್ ನಾರಾಯಣ
ನಾರಾಯಣ ಲಕ್ಷ್ಮೀ ನಾರಾಯಣ
ನಾರಾಯಣ ವೇಂಕಟ ನಾರಾಯಣ
ನಾರಾಯಣ ಆದಿ ನಾರಾಯಣ
ನಾರಾಯಣ ತಿರುಮಲ ನಾರಾಯಣ

೨.ಮಳೆ ಬರುವ ಕಾಲಕ್ಕೆ ಒಳಗ್ಯಾಕ
ಕೂತೇವು ಇಳೆಯೊಡನೆ ಜಳಕ
ಮಾಡೋಣ
ನಾವೂನು ಮೋಡಗಳ ಆಟ ನೋಡೋಣ

ಮರಿಗುಡುಗು ಕೆಲೆವಾಗ ಮಳೆಗಾಳಿ
ಸೆಳೆವಾಗ ಮರಗಿಡಗಳನ್ನು ಎಳೆವಾಗ
ನಾವ್ಯಾಕೆ ಮನೆಯಲ್ಲಿ ಅವಿತು ಕೂತೇವು

ಕೋಲ್ಮಿಂಚು ಇಣುಕಿಣುಕಿ ಕಣ್ಣುಕಣಿಸಿ
ಕೆಣಕೆಣಕಿ ಬಾ ಗೆಳೆಯ ಹೊರಗೆ ಎನುವಾಗ
ಒಳಸೇರಿ ಹರೆಮೀರಿಧಾಂಗ ಕೂತೇವು

**3.ಅದಿವೋ ಅಲ್ಲದಿವೋ ಶ್ರೀ ಹರಿ ವಾಸಮು**

**ಪದಿವೇಲ ಶೇಷುಲ ಪಡಗಲ ಮಯಮು ॥**

**ಚರಣಂ 1**

**ಅದೆ ವೇಂಕಟಾಚಲ ಮಖಿಲೋನ್ನತಮು**

**ಅದಿವೋ ಬ್ರಹ್ಮಾದುಲ ಕಪುರೂಪಮು । (2)**

**ಅದಿವೋ ನಿತ್ಯನಿವಾಸ ಮಖಿಲ
ಮುನುಲಕು**

**ಅದೆ ಚೂಡು ಡದೆ ಮೊಕ್ಕು
ಡಾನಂದಮಯಮು ॥**

ಅದಿವೋ ಅಲ್ಲದಿವೋ ಶ್ರೀ ಹರಿ ವಾಸಮು

ಪದಿವೇಲ ಶೇಷುಲ ಪಡಗಲ ಮಯಮು ॥

ಚರಣಂ 2

ಚೆಂಗಟ ನಲ್ಲದಿವೋ ಶೇಷಾಚಲಮೂ

ನಿಂಗಿ ನುನ್ನ ದೇವತಲ ನಿಜವಾಸಮು । (2)

ಮುಂಗಿಟ ನಲ್ಲದಿವೋ ಮೂಲನುನ್ನ ಧನಮು

ಬಂಗಾರು ಶಿಖರಾಲ ಬಹು ಬ್ರಹ್ಮಮಯಮು ॥

ಅದಿವೋ ಅಲ್ಲದಿವೋ ಶ್ರೀ ಹರಿ ವಾಸಮು

ಪದಿವೇಲ ಶೇಷುಲ ಪಡಗಲ ಮಯಮು ॥

ಚರಣಂ 3

ಕೈವಲ್ಯ ಪದಮು ವೇಂಕಟ ನಗ ಮದಿವೋ

ಶ್ರೀ ವೇಂಕಟಪತಿಕಿ ಸಿರುಲೈನದಿ । (2)

ಭಾವಿಂಪ ಸಕಲ ಸಂಪದ ರೂಪಮದಿವೋ

ಪಾವನಮುಲ ಕೆಲ್ಲ ಪಾವನ ಮಯಮೂ ॥

ಅದಿವೋ ಅಲ್ಲದಿವೋ ಶ್ರೀ ಹರಿ ವಾಸಮು

ಪದಿವೇಲ ಶೇಷುಲ ಪಡಗಲ ಮಯಮು ॥

4. ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು

ಏನೇ ಬರಲಿ ಯಾರಿಗೂ ಸೋತು ತಲೆಯ ಬಾಗದು

ಎಂದಿಗೂ ನಾನು ಹೀಗೆ ಇರುವೆ ಎಂದು ನಗುವುದು

ಹೀಗೆ ನಗುತಲಿರುವುದು..

ಗುಡಿಸಲೇ ಆಗಲಿ ಅರಮನೆ ಆಗಲಿ ಆಟ ನಿಲ್ಲದು

ಹಿರಿಯರೇ ಇರಲಿ ಕಿರಿಯರೆ ಬರಲಿ ಬೇದ ತೋರದು..

ಕಷ್ಟವೋ ಸುಖವೋ ಅಳುಕದೆ ಆಡಿ

ತೂಗುತಿರುವುದು .. ತೂಗುತಿರುವುದು..

ಮೈಯನೆ ಹಿಂಡಿ ನೊಂದರು

ಕಬ್ಬು ಸಿಹಿಯ ಕೊಡುವುದು ..

ತೇಯುತಲಿದ್ದರು ಗಂಧದ ಪರಿಮಳ ತುಂಬಿ ಬರುವುದು ..

ತಾನೆ ಉರಿದರು ದೀಪವು ಮನೆಗೆ ಬೆಳಕ ತರುವುದು ..

ದೀಪ .. ಬೆಳಕ ತರುವುದು ..

ಆಡಿಸುವಾತನ ಕೈ ಚಳಕದಲಿ ಎಲ್ಲ ಅಡಗಿದೆ

ಆತನ ಕರುಣೆಯೇ ಜೀವವ ತುಂಬಿ ಕುಣಿಸಿ ನಲಿಸಿದೆ

ಆ ಕೈ ಸೋತರೆ ಬೊಂಬೆಯ ಕತೆಯು

ಕೊನೆಯಾಗುವುದೇ .. ಕೊನೆಯಾಗುವುದೇ .

5. ಪಾಲಿಸಮ್ಮ ಮುದ್ದು ಶಾರದೆ |

ಎನ್ನ ನಾಲಿಗೆಯಲಿ ನಿಲ್ಲ ಬಾರದೆ ||

ಲೋಲಲೋಚನೆ ತಾಯಿ ನಿರುತ ನಂಬಿದೆ ನಿನ್ನ ||ಅಪ|| ಅಕ್ಷರಕ್ಷರ ವಿವೇಕವ | ನಿನ್ನ|

ಕುಕ್ಷಿಯೊಳೀರೇಳು ಲೋಕವ || ಸಾಕ್ಷತ್ ರೂಪದಿಂದ ಒಲಿದು ರಕ್ಷಿಸು ತಾಯೇ ||೧||

ಶೃಂಗಾರಪುರ ನೆಲೆವಾಸಿನೀ ದೇವೀ | ಸಂಗೀತ ಗಾನ ವಿಲಾಸಿನಿ || ಮಂಗಳ ಗಾತ್ರಳೆ ಭಳಿರೆ ಬ್ರಹ್ಮನ ರಾಣಿ ||೨||

ಸರ್ವಾಲಂಕಾರ ದಯಾಮೂರುತಿ ನಿನ್ನ ಚರಣವ ಸ್ತುತಿಸುವೆ ಕೀರುತಿ | ಗುರುಮೂರ್ತಿ ಪುರಂದರವಿಠಲನ್ನ ಸ್ತುತಿಸುವೆ ||೩||

6. ಹೆಮ್ಮೆ ನನಗೆ ಅಮ್ಮ

ಲಕ್ಷ್ಮೀನಾರಾಯಣ ಭಟ್ಟ ಎನ್ ಎಸ್

ಹೆಮ್ಮೆ ನನಗೆ ಅಮ್ಮ ನಿನ್ನ

ತಾಯಿಯೆಂದು ಕರೆಯಲು

ಕಂದನೆಂಬ ನಿನ್ನ ಪ್ರೀತಿ

ಸವಿಯು ಜೇನಿಗಿಂತಲು

ಏನು ತಾನೆ ಇದ್ದರೂ

ನಿನಗೂ ಸಿರಿವಂತರು?

ಬಲ್ಲೆ ನಾನೆ ಇರುವರೆಷ್ಟೋ

ನಿನಗೂ ಧೀಮಂತರು;

ಬಾಳಿಬಂದ ಗರಿಮೆಯಲ್ಲಿ

ಯಾರು ಸಮಕೆ ಬರುವರು?

ತಾಳಿ ನಿಂತ ಸಹನೆಯಲ್ಲಿ

ನಿನ್ನ ಯಾರು ಗೆಲುವರು?

ಪ್ರಾಚೀನ ಎನಿಸಿದರೂ

ಚಿರನೂತನೆ ನೀನು

ವೇದಮೂಲವಾದ ಜ್ಞಾನ-

ಸುಧೆಗೆ ನೀನು ಧೇನು;

ಕೋಟಿ ಕೋಟಿ ಬೆಳಗು ಅರಳಿ

ನಿನ್ನ ಪಾದ ತೊಳೆದಿವೆ

ನಿನ್ನ ಕಾಣಲೆಂದೆ ಚಂದ್ರ

ತಾರೆ ನಭದಿ ನೆರೆದಿವೆ.

ತಂಪು ಆಲದಡಿಗೆ ಬಂದು

ನಿಂತ ಭಕ್ತ ನಾನು

ಮೇಲಿನಿಂದ ಕೆಳಗುರುಳಿದ

ಬಿತ್ತವಾದರೇನು?

ನನ್ನ ಮನದಿ ಅರಳುತ್ತಿದೆ

ತಾಯೆ ನಿನ್ನ ರೂಪ

ಕಂಪು ಬೀರಿ ಸುತ್ತಲೆಲ್ಲ

ಹರಡಿ ನಿಲುವ ಧೂಪ.

7. ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ

ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ.

ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು

ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ.

ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ

ದನಿಯು ದನ ಕಾಯುವವನ ಕೊಳಲೊಡನೆ ಬರಲಿ.

ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು

ದಿನ ದಿನವು ಸವಿಯೂಟವಿಕ್ಕುತಿರಲೆನಗೆ.

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ

ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ.

ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ

ಗೋಪಾಲನಾಗಿರುವ ತಿಮ್ಮನೆನಗಿರಲಿ!

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ

ನನ್ನಾಸೆ ಏನೆಂದು ಎಲ್ಲರರಿತಿರಲಿ:

ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ;

ನರಕವಿವನೊಳಗೊಂಡಿರಲು ನರಕವಿರಲಿ!